# ಪ್ರಾರಬ್ಧ ಕರ್ಮ

■ ನಾಗನಾಥ್ ಜಿ. ಎಸ್.

ಇತ್ತೀಚೆಗೆ  ಅಂದರೆ ತೀರಾ ಇತ್ತೀಚೆಗೇನಲ್ಲ, ಮೊನ್ನೆ ಮೊನ್ನೆ ಅಂದರೆ ಮೊಬೈಲ್ ಫೋನ್ ಗೆ ವಾಟ್ಸಾಪ್ ಆಗಿನ್ನೂ ಪರಿಚಯವಾಗಿತ್ತಷ್ಟೆ. ಗುರುಗಳೊಬ್ಬರು ರಸ್ತೆ ಬದಿಯ ಮರವೊಂದರ ಕೆಳಗೆ ತಮ್ಮ ಮೊಬೈಲಲ್ಲಿ ಏನನ್ನೋ ಅರಸುತ್ತಾ ಕುಳಿತಿದ್ದ. ಅದೇ ದಾರಿಯಲ್ಲಿ ಯುವಕನೊಬ್ಬ ಅತ್ಯಂತ ಚಿಂತಾಕ್ರಾಂತ ಸ್ಥಿತಿಯಲ್ಲಿ ಬರುತ್ತಿದ್ದ. ಗುರುಗಳನ್ನು ಕಂಡೊಡನೆಯೇ ಒಂದು ಕ್ಷಣ ತನ್ನ ಚಿಂತೆಯೆಲ್ಲಾ ಮಾಯವಾಗಿ ಹೊಸ ಹುಮ್ಮಸ್ಸು ಬಂದಂತೆ ಗುರುಗಳ ಪಾದಕ್ಕೆ ಬಿದ್ದ. ಕರುಣೆಯಿಂದ ಗುರುಗಳು ಏನಾಯಿತೆಂದು ವಿಚಾರಿಸಿದರು. ಯುವಕ 'ಗುರುಗಳೇ, ಜೀವನವೇ ಬೇಸರವಾಗಿದೆ. ಎಲ್ಲಿ ಕೈ ಹಾಕಿದರೂ ಸಾಲು ಸಾಲು ಸೋಲು ಸೋಲು. ಏನ್ಮಾಡಲಿ?' ಎಂದ.

ಅದಕ್ಕೆ ಗುರುಗಳು 'ಎಲ್ಲಾ ನಿನ್ನ ಪ್ರಾರಬ್ಧ ಕರ್ಮ ಕಣಪ್ಪಾ... ಅದನ್ನ ಕಳೆದುಕೊಳ್ಳದ ಹೊರತು ನಿನಗೆ ಜೀವನದಲ್ಲಿ ಗೆಲುವು, ಯಶಸ್ಸು ಸಿಗದು' ಎಂದರು.

'ಹಾಗಾದರೆ ನನಗೊದಗಿರುವ ಪ್ರಾರಬ್ಧ ಕಳೆದುಕೊಳ್ಳಲು ಸಾಧ್ಯವಿದೆಯೇ? ಇದ್ದರೆ ಅದು ತಮಗೆ ತಿಳಿದಿರಲೇ ಬೇಕು, ದಯವಿಟ್ಟು ತಿಳಿಸಿ' ಎಂದು ಗುರುಗಳ ಕಾಲನ್ನು ಮತ್ತಷ್ಟು ಗಟ್ಟಿಯಾಗಿ ಹಿಡಿದುಕೊಂಡ.

ಗುರುಗಳು ನಿಧಾನವಾಗಿ ಯುವಕನ ತಲೆ ಸವರುತ್ತಾ...'ಹಾಗಿದ್ದರೆ ನಾನು ಈಗ ಹೇಳುವುದನ್ನು ಸರಿಯಾಗಿ ಕೇಳಿಸಿಕೋ.. ನೀನು ಈಗಿಂದೀಗಲೇ ಒಂದು ಸ್ಮಾರ್ಟ್ ಫೋನ್ ಖರೀದಿಸಿ ಅದಕ್ಕೆ ವಾಟ್ಸಾಪ್ ಅಪ್ಲಿಕೇಶನ್ ಡೌನ್ ಲೋಡ್ ಮಾಡಿಕೋ. 8–10 ಗ್ರೂಪ್ ಗಳನ್ನು ಪ್ರಾರಂಭಿಸು. ದಿನಾಲು ಬೆಳಿಗ್ಗೆ 5 ಗಂಟೆಯಿಂದ ಒಂದೊಂದೇ ಗ್ರೂಪ್ ಗಳಿಗೆ **good morning** ಅಂತ ಮೆಸೇಜ್ ಹಾಕು. ಅದರ ಜೊತೆಗೆ ಗೂಗಲ್ ನಿಂದ ಹಿಂದಿನ ರಾತ್ರಿಯೇ ಡೌನ್ ಲೋಡ್ ಮಾಡಿ ಸಿದ್ಧಪಡಿಸಿಟ್ಟುಕೊಂಡ ಚಿತ್ರವನ್ನೂ ಸೇರಿಸಿ ಕಳಿಸು. ಅದರಂತೆಯೇ ರಾತ್ರಿ 11.30 ರ ವೇಳೆಗೆ **good night** ಮೆಸೇಜ್ ಎಲ್ಲಾ ಗ್ರೂಪ್ ಗಳಿಗೂ ಹೋಗಬೇಕು. ಅರ್ಥವಾಯ್ತಾ? ಇಷ್ಟು ಮಾಡೋಕೆ ನಿನ್ನ ಕೈಲಿ ಆಗುತ್ತಾ?' ಎಂದು ಕೇಳಿದರು.

ಆಗ ಯುವಕ, 'ಅಲ್ಲಾ ಗುರುಗಳೇ, ವಾಟ್ಸಾಪ್ ನಲ್ಲಿ ಗುಡ್ ಮಾರ್ನಿಂಗ್, ಗುಡ್ ನೈಟ್ ಮೆಸೇಜ್ ಕಳಿಸೋಕು, ನನ್ನ ಪ್ರಾರಬ್ಧ ಕರ್ಮ ಕಳೆದುಕೊಳ್ಳೋದಕ್ಕೂ ಏನು ಸಂಬಂಧ?' ಎಂದು ಕೊಂಚ ನಿರಾಶಾ ಭಾವದಲ್ಲಿ ಕೇಳಿದ.  ಅದಕ್ಕೆ ಗುರುಗಳು 'ನೋಡಪ್ಪಾ ಶಿಷ್ಯಾ, ನೀನು ಹೊತ್ತಿಲ್ಲದ ಹೊತ್ತಿನಲ್ಲಿ ಅವಶ್ಯಕತೆಯೇ ಇಲ್ಲದ ಗುಡ್ ಮಾರ್ನಿಂಗ್, ಗುಡ್ ನೈಟ್ ಮೆಸೇಜ್ ಕಳಿಸಿದಾಗ ಅದನ್ನ ಸ್ವೀಕರಿಸಿದವರು ನಿನ್ನ ಮೆಸೇಜ್ ನೋಡಿದ ಕೂಡಲೇ ನಿನಗೆ ಹಿಡಿ ಶಾಪ ಹಾಕುತ್ತಾರೆ. ಹಾಗೆ ಒಬ್ಬೊಬ್ಬರೂ ನಿನಗೆ ಶಾಪ ಹಾಕುತ್ತಾ ಹೋದಂತೆ ನಿನ್ನ ಪ್ರಾರಬ್ಧದಲ್ಲಿ  ಶೇ. 0. 01 ಕಳೆದು ಅದು ಶಾಪ ಹಾಕಿದವರಿಗೆ ಅಂಟಿಕೊಳ್ಳುತ್ತದೆ. ಹಾಗೇ ಎಷ್ಟು ಜನರು ನಿನಗೆ ಶಾಪ ಹಾಕುತ್ತಾರೋ ಅಷ್ಟಷ್ಟು ಜನರಿಗೆ ನಿನ್ನ ಪ್ರಾರಬ್ಧ ವರ್ಗಾವಣೆ ಆಗುತ್ತಾ ಹೋಗಿ ಆದಷ್ಟು ಬೇಗ ನೀನು ಎಲ್ಲಾ ರೀತಿಯ ಕರ್ಮಗಳಿಂದ ಮುಕ್ತನಾಗಿ ಇದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದಿ ನಿನ್ನ ಜೀವನದಲ್ಲಿ ಸಂತೋಷ, ನೆಮ್ಮದಿ ಕಾಣುವಿ' ಎಂದರು.

ಇಷ್ಟು ಹೇಳುತ್ತಿದ್ದಂತೆ ಆ ಯುವಕ 'ಓ' ಎಂದು ಕೂಗುತ್ತಾ ಓಡತೊಡಗಿದ. ಪಾಪ ಗುರುಗಳು 'ಒಂದ್ ನಿಮಿಷ ಇರಯ್ಯಾ... ಈ ವಿಷಯ ಎಲ್ಲಾ ಕಡೆ ಹೇಳಿಕೊಂಡು ತಿರುಗಾಡಬೇಡ... ನಿನ್ನಲ್ಲೇ ಇರಲಿ' ಎಂದು ಹೇಳಿದ್ದು ಅವನಿಗೆ ಕೇಳಿಸದೇ ಹೋದದ್ದರ ಪರಿಣಾಮವೇ ಇಂದು ಪ್ರತಿಯೊಬ್ಬರ ಫೋನಿನಲ್ಲೂ ದಿನನಿತ್ಯ ಗುಡ್ ಮಾರ್ನಿಂಗೂ, ಗುಡ್ ನೈಟ್ ಮೆಸೇಜ್ ಗಳ ಪ್ರವಾಹವೇ ಹರಿದು ಬರುತ್ತಿದೆ. ಈ ಐಡಿಯಾ ಕೊಟ್ಟ ಗುರುಗಳೂ ಹುಚ್ಚು ಹಿಡಿದು ಎಲ್ಲೋ ಬೀದಿ ಬೀದಿ ಅಲೆಯುತ್ತಾ ತಮ್ಮಷ್ಟಕ್ಕೆ ತಾವೇ ನಗುತ್ತಾ ಕಿರುಚಾಡುತ್ತಿದ್ದಾರೆ ಎಂದು ಇದೇ ಯುವಕನಿಗೆ ಯಾರೋ ಮೊನ್ನೆ ಮಾಹಿತಿ ಕೊಟ್ಟರಂತೆ. ■



ಚಿತ್ರ: ಶಿಲ್ಪಾ